# ಮೈಸೂರ ಗೆಜಿಟ್.

ನಂ. 9 ] ಸರ್ಕಾರದಿಂದ ಪ್ರಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 14, ಸನ್ 1895.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇಷ್ಟ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ಟ್ ಜಡ್ಜ್‌ರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ, ಕಾಲಸ್ಥಿತಿ ರಿಪೋರ್ಟುಗಳು; ಪ್ರೋಸ್ಪ್ಯಾಪಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ಟ್‌ಗಳು.—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಪ್ರತೀ ಬೇರೆಯಾಗಿ ಪುಟ ನಂಬರ್ ಕೊಡಲ್ಪಡುತ್ತೆ.

## 1ನೇ ಭಾಗ.

### ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

### ಜನರಲ್.

ತಾರೀಖು 25ನೇ ಫಿಬ್ರವರಿ 1895.

ನಂ. 13311.—ಜಿ. 3047.—ಇದರಡಿ ತಿಳಿಸಲ್ಪಡುವ ಮೊಕರರಾತಿಗಳು ಹುಕುಂ ಮಾಡಲ್ಪಟ್ಟಿರುತಿವೆ:—

1. ಅಸಿಸ್ಟೆಂಟ್ ಗವರ್ಮೆಂಟ್ ಅಡ್ವೊಕೇಟರಾದ ಮೆಸ್ಟರ್ ಎಸ್. ರಾಮಸ್ವಾಮಯ್ಯರ್‌ಯವರು, ತಮ್ಮ ಸ್ವಂತಕೆಲಸಗಳೊಡನೆ, ಗವರ್ಮೆಂಟ್ ಅಡ್ವೊಕೇಟರ ಕೆಲಸಗಳಂ ಮಾಡತಕ್ಕದ್ದು.

2. ಮುಜರಾಯಿ ಸೂಪರ್ಟೆಂಡೆಂಟ್ ಮತ್ತು ಸೆಕ್ರಿಟೆರಿಯಾದ ಮೆಸ್ಟರ್ ಎ. ಶ್ರೀನಿವಾಸಾಚಾರ್ಲು ಯವರು, ತಮ್ಮ ಕೆಲಸಗಳೊಡನೆ, ರಿಜಿಸ್ಟ್ರೇಷ್ಟ್ ಇನ್‌ಸ್ಪೆಕ್ಟರ್ ಜನರಲವರ ಕೆಲಸಗಳಂ ಮಾಡತಕ್ಕದ್ದು.

3. ಸ್ಪೆಷಲ್ ಡ್ಯೂಟಿ ಆಫಿಸರಾದ ಮೆಸ್ಟರ್ ವಿ. ಎನ್. ನರಸಿಹ್ಮಯ್ಯಂಗಾರ್ರವರು, ಲೆಜಿಸ್ಲೇಟಿವ್ ಕೆಲಸದಿಂದ ಮೆಸ್ಟರ್ ವಿಶಾಷ್ಠೆ ಅಯ್ಯರವರನ್ನು ಬಿಡುಗಡೆ ಮಾಡಿ, ಮೈಸೂರ್ ಗವರ್ಮೆಂಟ್ ಜನರಲ್ ಸೆಕ್ರಿಟೆರಿ ಕೆಲಸವಂ ನೋಡತಕ್ಕದ್ದು.

4. ಅಂಡರ್ ಸೆಕ್ರಿಟೆರಿ ಮೆಸ್ಟರ್ ಎಲ್. ಅನಂತಸಾಮಿರಾವ್, ಬಿ. ಎ. ಯವರು, ಮೆಸ್ಟರ್ ಟಿ. ಆನಂದರಾಯರು ರಜಾಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚೀಫ್ ಸೆಕ್ರಿಟೆರಿ ಕೆಲಸವನ್ನು ಬದಲೀ ನೋಡತಕ್ಕದ್ದು.